ಸದರಿ ಅವಧಿಯಲ್ಲಿ ಅರ್ಧಘಂಟೆ ಕಾಲಾವಧಿ ಚರ್ಚೆಯಲ್ಲಿ ರಾಜ್ಯದಲ್ಲಿನ ತೆಂಗಿನ ಮರಗಳು ಒಣಗುತ್ತಿರುವುದರ ಬಗ್ಗೆ ಪ್ರಸ್ತಾಪಿಸಿದ್ದು, 7 ಜನ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ್ದು, ಸರ್ಕಾರದಿಂದ ಉತ್ತರಿಸಲಾಗಿದೆ.

ಈ ಅವಧಿಯಲ್ಲಿ ಒಟ್ಟು 2755 ಪ್ರಶ್ನೆಗಳನ್ನು ಮಾನ್ಯ ಸದಸ್ಯರುಗಳಿಂದ ಸ್ವೀಕರಿಸಿದ್ದು, 380 ಚುಕ್ಕೆ ಗುರುತಿನ ಪ್ರಶ್ನೆಗಳ ಪೈಕಿ 282 ಪ್ರಶ್ನೆಗಳಿಗೆ ಹಾಗೂ 2301 ಚುಕ್ಕೆ ರಹಿತ ಪ್ರಶ್ನೆಗಳ ಪೈಕಿ 1712 ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಲಾಗಿದೆ 45 ಪ್ರಶ್ನೆಗಳಿಗೆ ವರದಿಯನ್ನು ಸ್ವೀಕರಿಸಲಾಗಿರುತ್ತದೆ. 36 ಪ್ರಶ್ನೆಗಳು ತಿರಸ್ಕೃತಗೊಂಡಿವೆ.

ಸದರಿ ಅವಧಿಯಲ್ಲಿ 173 ಸಭೆಯ ಮುಂದಿಡಲಾದ ಕಾಗದ ಪತ್ರಗಳನ್ನು ಸದನಕ್ಕೆ ಒಪ್ಪಿಸಲಾಗಿದೆ. ಈ ಅವಧಿಯಲ್ಲಿ 03 ಗಮನ ಸೆಳೆಯುವ ಸೂಚನೆಗಳು ಚರ್ಚೆಯಾಗಿರುತ್ತವೆ. ಶೂನ್ಯ ವೇಳೆಯಲ್ಲಿ 42 ವಿಷಯಗಳನ್ನು ಪ್ರಸ್ತಾಪಿಸಲಾಗಿದೆ.

ಈ ಅಧಿವೇಶನದಲ್ಲಿ " ಸಂಸತ್ತಿನ ಉಭಯ ಸದನಗಳ ಮೂಲಕ ಅಂಗೀಕರಿಸಲಾದಂತೆ ಸಂವಿಧಾನ (ತೊಂಭತ್ತೈದನೇ ತಿದ್ದುಪಡಿ) ವಿಧೇಯಕ 2003 ರಲ್ಲಿ ಮಾಡಲು ಉದ್ದೇಶಿಸಿರುವ, ಭಾರತ ಸಂವಿಧಾನದ 368ನೇ ಅನುಚ್ಛೇದ (2)ನೇ ಖಂಡದ ಪರಂತುಕದ (ಸಿ) ಖಂಡದ ವ್ಯಾಪ್ತಿಯೊಳಗೆ ಬರುವ ತಿದ್ದುಪಡಿಗಳನ್ನು ಅಂಗೀಕರಿಸಲಾಗಿದೆ".

ಈ ಅಧಿವೇಶನದಲ್ಲಿ ಧನವಿನಿಯೋಗ ವಿಧೇಯಕಗಳು ಸೇರಿದಂತೆ, ವಿಧಾನ ಪರಿಷತ್ತಿನ ವಿಧೇಯಕಗಳನ್ನೊಳಗೊಂಡಂತೆ 18 ವಿಧೇಯಕಗಳನ್ನು ಪರ್ಯಾಲೋಚಿಸಿ, ಚರ್ಚೆಯ ನಂತರ ಅಂಗೀಕರಿಸಲ್ಪಟ್ಟಿರುತ್ತವೆ.

ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ನನ್ನೊಡನೆ ಸಹಕರಿಸಿದ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳಿಗೂ, ಸಚಿವ ಸಂಪುಟದ ಸದಸ್ಯರುಗಳಿಗೂ, ವಿರೋಧ ಪಕ್ಷದ ನಾಯಕರಿಗೂ, ವಿವಿಧ ಪಕ್ಷಗಳ ನಾಯಕರುಗಳಿಗೂ, ವಿಧಾನ ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೂ, ಪತ್ರಕರ್ತರಿಗೂ, ಆಕಾಶವಾಣಿ ಮತ್ತು ಎಲ್ಲಾ ದೂರದರ್ಶನ ಮಾಧ್ಯಮಗಳಿಗೂ, ಅಂತರ್ಜಾಲದಲ್ಲಿ ಬರಲು ಸಹಕರಿಸಿದ ಮಾಧ್ಯಮಗಳಿಗೂ, ವಿವಿಧ ಇಲಾಖಾ ಅಧಿಕಾರಿಗಳು ಹಾಗೂ ವಿಶೇಷವಾಗಿ ಕರ್ನಾಟಕ ವಿಧಾನಸಭೆ ಸಚಿವಾಲಯದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ನಾನು ಕೊನೆಯಲ್ಲಿ ಇಷ್ಟೇ ಹೇಳುವುದು. ಇವೊತ್ತು ಪ್ರಜಾಪ್ರಭುತ್ವದಲ್ಲಿ 35 ಜನರು 185 ಜನರು ಹಕ್ಕನ್ನು ಮೊಟಕು ಮಾಡುತ್ತಾ ಇದ್ದಾರೆ. ಇದನ್ನು ನಾನು ಸಹಿಸುವುದಿಲ್ಲ. ಈ ರೀತಿಯಾಗಿ ಮುಂದೆ ಮಾಡಬೇಡಿ ಎಂದು ರಿಕ್ವೆಸ್ಟ್ ಮಾಡಿ ಕೊಂಡು ಈಗ ಸದನವನ್ನು ಅನಿರ್ಧಿಷ್ಟ ಕಾಲದವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2.27 ಘಂಟೆಗೆ ಅನಿರ್ಧಿಷ್ಟಕಾಲದವರೆಗೆ ಮುಂದೂಡಲ್ಪಟ್ಟಿತು.)

4. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಅಧ್ಯಕ್ಷರು: ಈ ದಿನದ ಪಟ್ಟಿಯಲ್ಲಿರುವ ಪ್ರಶ್ನೋತ್ತರಗಳನ್ನು ನಡವಳಿಕೆಯಲ್ಲಿ ಸೇರಿಸಲಾಗಿದೆ. (ಅನುಬಂಧ I)

4.ಅನುಬಂಧ I

ದಿನಾಂಕ 8.8.2003ರ ಚುಕ್ಕೆಗುರುತಿನ ಪ್ರಶ್ನೋತ್ತರಗಳು

ರಾಜ್ಯದಲ್ಲಿ ಪಡಿತರ ಬೇಡಿಕೆ ಚೀಟಿದಾರರಿಗೆ ಜೋಳವನ್ನು ಒದಗಿಸುವುದು

627 (5195) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ, (ಬೈಲಹೊಂಗಲ) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯಿಂದ ಪಡಿತರ ಚೀಟಿದಾರರಿಗೆ ಯಾವ ಯಾವ ಭಾಗಗಳಲ್ಲಿ ಯಾವ ಯಾವ ಆಹಾರ ಧಾನ್ಯಗಳನ್ನು ಪೂರೈಸಲಾಗುತ್ತಿದೆ;

ಆ) ಉತ್ತರ ಕರ್ನಾಟಕ ಜನರು ಹೆಚ್ಚಾಗಿ ಜೋಳವನ್ನು ಉಪಯೋಗಿಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಪಡಿತರ ಚೀಟಿದಾರರಿಗೆ ಅಕ್ಕಿ ಗೋಧಿಯ ಜೊತೆಗೆ ಜೋಳವನ್ನು ಸಹ ವಿತರಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು):

ಅ) ರಾಜ್ಯಾದ್ಯಂತ ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ಎಲ್ಲಾ ಪಡಿತರ ಚೀಟಿದಾರರಿಗೂ ಅನ್ವಯವಾಗುವಂತೆ ಏಕ ರೂಪವಾಗಿ ಅಕ್ಕಿ ಹಾಗೂ ಗೋಧಿ ವಿತರಿಸಲಾಗುತ್ತಿದೆ. ಅಲ್ಲದೆ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಸಂಗ್ರಹವಾದ ರಾಗಿಯನ್ನು ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ವಿತರಿಸಲಾಗುತ್ತಿದೆ.

ಆ) ಹೌದು

ಇ) ಮುಖ್ಯವಾಗಿ ಕೇಂದ್ರ ಸರ್ಕಾರವು ನೀಡುವ ಆಹಾರಧಾನ್ಯಗಳನ್ನು ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ವಿತರಿಸಲಾಗುವುದು. ಕೇಂದ್ರ ಸರ್ಕಾರವು ಜೋಳವನ್ನು ಒದಗಿಸುವುದಿಲ್ಲ. ಒಂದು ವೇಳೆ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಜೋಳವು ಸಂಗ್ರಹಣೆಯಾದಲ್ಲಿ ಕೇಂದ್ರ ಸರ್ಕಾರವು ಅದನ್ನು ಸಾರ್ವಜನಿಕ ವಿತರಣಾ ಪದ್ಧತಿಯಲ್ಲಿ ವಿತರಿಸಲು ಅನುಮತಿ ನೀಡುತ್ತದೆ. ಆದರೆ ಪ್ರಸ್ತುತ ಜೋಳದ ಮಾರುಕಟ್ಟೆ ಬೆಲೆಯು ಯಾವಾಗಲೂ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ನಿಗದಿಪಡಿಸಿದ ಬೆಲೆಗಿಂತಲೂ ಜಾಸ್ತಿಯಿರುವುದರಿಂದ ಜೋಳವು ವಿತರಣೆಗೆ ಲಭ್ಯವಾಗುವುದಿಲ್ಲ.

ಬೋನಾಳ್ ಕೆರೆಯ ಅನುಪಯುಕ್ತ ನೀರಿನ ಬಳಕೆ

628 (5412) : ಶ್ರೀ ರಾಜಾವೆಂಕಟಪ್ಪ ನಾಯಕ (ಶೋರಾಪುರ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೋನಾಳ್ ಕೆರೆಯ ಕೋಡಿಯಿಂದ ನೀರನ್ನು ಶಹಾಪುರ ಶಾಖಾ ಕಾಲುವೆಯ ವಿತರಣಾ ಕಾಲುವೆ ಸಂಖ್ಯೆ 6ಕ್ಕೆ ಹರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಎಚ್.ಕೆ.ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಬೋನಾಳ ಕೆರೆಯು ಸುರಪುರ ಕಾಲುವೆಯ ಬೋನಾಳ್ ಗ್ರಾಮದ ಸಮೀಪ ಇರುತ್ತದೆ. ಶಹಾಪುರ ಶಾಖಾ ಕಾಲುವೆಯ ವಿತರಣಾ ಕಾಲುವೆಗಳಲ್ಲಿ ರೈತರು ಉಪಯೋಗಿಸಿದ ನಂತರ ಹೆಚ್ಚುವರಿಯಾಗಿ ಉಳಿಯುವ ನೀರು ಪುನರುತ್ಥಾನವಾಗಿ ಈ ವಿತರಣಾ ಕಾಲುವೆಗಳ ಅಚ್ಚುಕಟ್ಟು ಪ್ರದೇಶದಲ್ಲಿರುವ ಬೋನಾಳ್ ಕೆರೆಯಲ್ಲಿ ಸಂಗ್ರಹವಾಗುತ್ತದೆ. ಈ ರೀತಿ ಉಪಯೋಗಿಸಿಕೊಳ್ಳದೆ